ಕೊಳವೆ ಬಾವಿಗಳ ಬಗ್ಗೆ

೫೦೨. ಶ್ರೀ ರಾವಲಿಂಗರೆಡ್ಡಿ (ಜಯನಗರ).–ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೇಸಿಗೆಯಾದ್ಯಂತ ಕೆಲವಡೆ ಕುಡಿಯುವ ನೀರಿನ ಕೊಳವೆ ಬಾವಿಗಳು ಒಡೆದು ನೀರು ವ್ಯರ್ಥವಾಗುತ್ತಿರುವುದು ನಿಜವೆ ?

ಆ) ಹಾಗಿದಲ್ಲಿ, ದೂರುಕೊಟ್ಟರೂ ಸಂಬಂಧಪಟ್ಟವರು ದುರಸ್ಥಿ ಮಾಡದಿರಲು ಕಾರಣಗಳೇನು?

ಇ) ನೀರು ಬಿಲ್ಲಿನ ಜೊತೆಗೆ ಬೋರ್‌ವೆಲ್ ಮೇಲ್ವಿಚಾರಣೆ ವೆಚ್ಚ ಮತ್ತು ಸ್ಯಾನಿಟರಿ ಸೆಸ್ ವೆಚ್ಚವೆಂದು ಎಂದಿನಿಂದ ಸಾರ್ವಜನಿಕರಿಂದ ವಸೂಲಿ ಮಾಡಲಾಗುತ್ತಿದೆ, ಅದಕ್ಕೆ ಕಾರಣಗಳೇನು ?

ಶ್ರೀ ವೀರೇಂದ್ರಪಾಟೀಲ್ (ಮುಖ್ಯಮಂತ್ರಿಗಳು).—

ಅ) ಇಲ್ಲ

ಆ) ಕೊಳವೆ ಬಾವಿಗಳು ಸರಿಯಾಗಿ ಕೆಲಸಮಾಡದೆ ಇರುವ ಬಗ್ಗೆ ದೂರುಗಳು ಬಂದಿರುವುದಿಲ್ಲ ದೂರುಗಳು ಬಂದಲ್ಲಿ ಕೊಳವೆ ಬಾವಿಗಳನ್ನು ದುರಸ್ಥಿ ಮಾಡಲು ಕೂಡಲೇ ಕ್ರಮಕೈಗೊಳ್ಳಲಾಗುವುದು.

ಇ) ಬೋರ್‌ವೆಲ್ ಮೇಲ್ವಿಚಾರಣೆ ವೆಚ್ಚ ಮತ್ತು ಸ್ಯಾನಿಟರಿ ಸೆಸ್ ವೆಚ್ಚವನ್ನು ಕ್ರಮವಾಗಿ ಆಗಸ್ಟ್ ೮೮ ರಿಂದ ಮತ್ತು ೧–೪–೮೭ರಿಂದ ವಸೂಲಿ ಮಾಡಲಾಗುತ್ತಿದೆ. ಬೆಂಗಳೂರು ಜಲಮಂಡಳಿಗೆ ತನ್ನ ಸಂಸ್ಥೆಯ ನಿರ್ವಹಣೆಗೆ ಯಾವುದೇ ರೀತಿಯ ಹಣಕಾಸಿನ ನೆರವಿಲ್ಲದೆ ಇದರ ನಿರ್ವಹಣೆಗೆ ನೀರಿನ ಶುಲ್ಕವನ್ನೇ ಅವಲಂಬಿಸಿದೆ.

ಸಹಕಾರ ಸಂಘ ಸಂಸ್ಥೆಗಳ ಬಡ್ಡಿ ಮನ್ನಾದ ಬಗ್ಗೆ

೧೬೫. (ಸಿ) ಶ್ರೀ ಬಿ. ಎನ್. ಬಚ್ಚೇಗೌಡ (ಹಿರೇಕೆರೂರು).—ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಸರ್ಕಾರ ರೈತರಿಗೆ ಸಹಕಾರ ಸಂಘ ಸಂಸ್ಥೆಗಳ ಮೂಲಕ ಶೇಕಡ ೭ರಷ್ಟು ಬಡ್ಡಿ ದರದಲ್ಲಿ ಸಾಲ ಕೊಡಲು ಉದ್ದೇಶಿಸಿದೆಯೇ ? ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಶ್ರೀ ಹೆಚ್. ಆರ್. ರಾಜು (ಸಹಕಾರ ರಾಜ್ಯ ಮಂತ್ರಿಗಳು).—

ಇಲ್ಲ. ಆದಾಗ್ಯೂ ರಾಜ್ಯದ ವಿತ್ತ ಸಚಿವರು ೧೯೯೦–೯೧ನೇ ಆಯವ್ಯಯ ಭಾಷಣದಲ್ಲಿ ನಿಗದಿತ ಅವಧಿಯೊಳಗೆ ಬೆಳೆಸಾಲ ಮರುಪಾವತಿ ಮಾಡಿದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ದಿನಾಂಕ ೨–೧೦–೧೯೮೯ ರಿಂದ ಪೂರ್ವಾನ್ವಯವಾಗುವಂತೆ ಒಂದು ಹೊಸ ಬಡ್ಡಿ ಸಹಾಯಧನ ಯೋಜನೆಯನ್ನು ಜಾರಿಗೊಳಿಸುವುದಾಗಿ ಘೋಷಿಸಿದ್ದರು. ಆದರೆ ಹಾಗೆ ಘೋಷಿಸಲಾದ ತಕ್ಷಣವೇ ನಬಾರ್ಡ್ ಸಂಸ್ಥೆಯು ಆಪೆಕ್ಸ್ ಬ್ಯಾಂಕಿಗೆ ಪುನರ್ಧನ ಸೌಲಭ್ಯವನ್ನು ನಿಲ್ಲಿಸಿತು. ಆದಕಾರಣ ನಬಾರ್ಡ್‌ನ ಆಕ್ಷೇಪಣೆಗಳನ್ನು ಗಮನದಲ್ಲಿಟ್ಟು ಪರ್ಯಾಯ ಯೋಜನೆಯನ್ನು ರೂಪಿಸಲು ಸರ್ಕಾರ ಯೋಚಿಸುತ್ತಿದೆ. ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳು ಮತ್ತು

ಇತರೆ ಅಧಿಕಾರಿಗಳ ವಿಚಾರಣಾ ಆಯೋಗ

೨೬೨. ಶ್ರೀ ಎಂ. ವಿ. ವೆಂಕಟಪ್ಪ (ಮಂಗಳಾಗಿಲು).–ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಿನಾಂಕ ೧–೪–೮೭ ರಿಂದ ೧–೪–೮೯ರವರೆಗೆ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳು ಮತ್ತು ಇತರೆ ಅಧಿಕಾರಿಗಳ ನೇತೃತ್ವದಲ್ಲಿ ಸರ್ಕಾರವು ರಚಿಸಿರುವ ವಿಚಾರಣಾ ಆಯೋಗಗಳ ಹೆಸರುಗಳು ?

ಆ) ಯಾವ ವ್ಯಕ್ತಿಗಳ ವಿರುದ್ಧ ಈ ಆಯೋಗಗಳನ್ನು ರಚಿಸಲಾಗಿದೆಯೋ ಅವರ ಹೆಸರುಗಳು?

ಇ) ಎಷ್ಟು ಪ್ರಕರಣಗಳಲ್ಲಿ ವರದಿಗಳನ್ನು ಸಲ್ಲಿಸಲಾಗಿದೆ ?

ಈ) ಅಂತಹ ವರದಿಗಳಲ್ಲಿ ಪ್ರತಿಯೊಂದು ವರದಿ ಮೇಲೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಉ) ಈ ವಿಚಾರಣಾ ಆಯೋಗಗಳಿಗೆ ಮಾಡಲಾದ ಒಟ್ಟು ವೆಚ್ಚ ಎಷ್ಟು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಮತ್ತು ಆ)

೧. ಪಿ.ಕೆ. ಶ್ಯಾಮಸುಂದರ್ ಆಯೋಗ :

೧೯೮೭ರ ಸೆಪ್ಟೆಂಬರ್‌ನಲ್ಲಿ ಬೀದರ್‌ನಲ್ಲಿ ಸಿಖ್ ವಿದ್ಯಾರ್ಥಿಗಳ ಮತ್ತು ಇನ್ನಿತರರ ನಡುವ ನಡೆದ ಘರ್ಷಣೆಯ ಬಗ್ಗೆ ತನಿಖೆ ನಡೆಸಲು.

೨. ಎಂ. ಬಿ. ವಿಶ್ವನಾಥ್ ಆಯೋಗ :

೧೯೮೮ರ ಜನವರಿಯಲ್ಲಿ ಗುರುಮಿತ್‌ಕಲ್‌ನಲ್ಲಿ ನಡೆದ ಪೋಲೀಸ್ ದೌರ್ಜನ್ಯದ ಬಗ್ಗೆ ತನಿಖೆ ನಡೆಸಲು.

೩. ಬಿ. ಕೆ. ಸೋಮಶೇಖರ್ ಆಯೋಗ :

೧೯೮೭ರ ಫೆಬ್ರುವರಿಯಲ್ಲಿ ಗುಜುನೂರಿನಲ್ಲಿ ಶಾಶ್ವಾಷಕಿಯಾಗಿದ್ದ ಶ್ರೀಮತಿ ಪದ್ಮಮ್ಮ ಮತ್ತು ಅವರ ಪತಿ ಶ್ರೀ ನಾರಾಯಣ ಸ್ವಾಮಿ ಅವರ ಮೇಲೆ ಆಲ್ಲಿನ ಪೋಲೀಸರು ನಡೆಸಿದರೆನ್ನಲಾದ ಹಲ್ಲೆ ಬಗ್ಗೆ ಮತ್ತು ತತ್‌ಸಂಬಂಧವಾಗಿ ಪಾವಗಡದಲ್ಲಿ ನಡೆದ ಪೋಲೀಸ್ ಗೋಲಿಬಾರ್ ಬಗ್ಗೆ ತನಿಖೆ ನಡೆಸಲಂ.

೪) ಮುರಳಿಧರ್ ರಾವ್ ಆಯೋಗ :

ದಿನಾಂಕ ೧೭-೧೨-೮೭ರ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಪ್ರಕಟವಾದ ಸಣ್ಣ ಕತೆಯೊಂದರ ಪ್ರಕಟಣೆಯ ವಿರುದ್ಧ ಬೆಂಗಳೂರು, ಮೈಸೂರು ಮತ್ತು ತುಮಕೂರಿನಲ್ಲಿ ಪ್ರತಿಭಟನೆ ನಡೆಸಿದವರ ವಿರುದ್ಧ ಪೋಲೀಸರು ಗೋಲಿಬಾರ್ ಮಾಡಿ ಕೆಲವು ವ್ಯಕ್ತಿಗಳು ಮೃತರಾಗಿ ಹಲವರು ಗಾಯಗೊಂಡರು ಈ ಘಟನೆಗಳ ಬಗ್ಗೆ ತನಿಖೆ ನಡೆಸಲು.

೫. ವಕ್ಫ್ ವಿಚಾರಣಾ ಆಯೋಗ ;

ರಾಜ್ಯದಲ್ಲಿನ ವಕ್ಫ್ ಆಸ್ತಿಪಾಸ್ತಿಗಳ ದುರುಪಯೋಗದ ಬಗ್ಗೆ ತನಿಖೆ ನಡೆಸಲು.

ಇ) ಮೂರು :—೧ ಪಿ. ಕೆ. ಶ್ಯಾಮಸುಂದರ್ ಆಯೋಗ
೨ ವಕ್ಫ್ ವಿಚಾರಣಾ ಆಯೋಗ
೩ ಬಿ. ಕೆ. ಸೋಮಶೇಖರ್ ಆಯೋಗ

ಈ) ಪಿ. ಕೆ. ಶ್ಯಾಮಸುಂದರ್ ಆಯೋಗ ಮತ್ತು ಬಿ. ಕೆ. ಸೋಮಶೇಖರ್ ಆಯೋಗಗಳು ತಮ್ಮ ವರದಿಗಳನ್ನು ಇತ್ತೀಚೆಗೆ ಸರ್ಕಾರಕ್ಕೆ ಸಲ್ಲಿಸಿವೆ. ಈ ವರದಿಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ವಕ್ಫ್ ವಿಚಾರಣಾ ಆಯೋಗದ ಅಧ್ಯಕ್ಷರಾದ ಶ್ರೀ ಬಷೀರ್ ಹುಸೈನ್ ಅವರು ವರದಿಯನ್ನು ಸಲ್ಲಿಸಿದ್ದಾರೆ. ಆದರೆ ಸದರಿ ಆಯೋಗದ ಇನ್ನಿಬ್ಬರು ಸದಸ್ಯರು ಈ ವರದಿಯನ್ನು ಅನುಮೋದಿಸಿಲ್ಲವಾದ್ದರಿಂದ ಈ ವರದಿಯನ್ನು ಸರ್ಕಾರವು ತಿರಸ್ಕರಿಸಿದೆ. ಆದುದರಿಂದ, ಕ್ರಮ ತೆಗೆದುಕೊಳ್ಳುವ ಪ್ರಮೇಯ ಉದ್ಭವಿಸುವುದಿಲ್ಲ.

ಉ) ಈ ವಿಚಾರಣಾ ಆಯೋಗಗಳಿಗೆ ಮಾಡಲಾದ ಒಟ್ಟು ವೆಚ್ಚ ರೂ. ೧೨,೧೧,೬೧೫.

ಐ.ಎ.ಎಸ್. ಅಧಿಕಾರಿಗಳ ಬಗ್ಗೆ

೫೯೨. **ಶ್ರೀ ಎಂ. ವಿ. ವೆಂಕಟಪ್ಪ** (ಮುಳಬಾಗಿಲು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಒಟ್ಟು ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು ?

ಆ) ಈ ಅಧಿಕಾರಿಗಳಿಗೆ ಕನ್ನಡ ಕಲಿಯುವುದಕ್ಕಾಗಿ ಸರ್ಕಾರವು ನೀಡುತ್ತಿರುವ ಉತ್ತೇಜನಗಳೇನು ?